(SRI AZEEZ SAIT)

Gowda knows definitely, and has got any decency, he should come out with it. I, as a Member of the House have given charge sheet in writing. Even today, let him give it in writing and face the consequences.

ಶ್ರೀ ಎಚ್.ಡಿ. ದೇವೇಗೌಡ.—ಡೀಸೆನ್ಸಿ ಅಂಡ್ ಡೆಕೋರಂ ಬಗ್ಗೆ ಮಾತನಾಡಿದ್ದಾರೆ. ಲೂಸ್ ಟಾಕ್ ಬಗ್ಗೆ ಮಾತನಾಡಿದ್ದಾರೆ. ಡೀಸೆನ್ಸಿ, ಡೆಕೋರಂನ್ನು ಅವರಿಂದ ಕಲಿತುಕೊಳ್ಳಬೇಕಾಗಿಲ್ಲ. ಇದು ಚೀಫ್ ಮಿನಿಸ್ಟರ್ ಪೋರ್ಟ್‌ಫೊಲೀಯೊಗೆ ಸಂಬಂಧಪಟ್ಟ ವಿಷಯ ಆದ್ದರಿಂದ ನಾವು ಮಾತನಾಡುವುದೆಲ್ಲ ಅವರಿಗೆ ವರದಿ ಹೋಗುತ್ತದೆ. ಎಲ್ಲಕ್ಕಿಂತ ಹೆಚ್ಚಿಗೆ ಅವರಿಗೆ ವರದಿ ಬರುತ್ತದೆ. ಲೂಸ್ ಟಾಕ್ ಮಾತನಾಡುವ ಅಭ್ಯಾಸ ಸಾಧ್ಯವಾದಮಟ್ಟಿಗೆ ಮಾಡಬಾರದು.

ಶ್ರೀ ಅಜೀಜ್ ಸೇಟ್.—ಎಲ್ಲಾ ಇದೆ.

ಶ್ರೀ ಎಚ್.ಡಿ. ದೇವೇಗೌಡ —ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ನಿಮ್ಮ ಪೋಲೀಸ್ ರಿಪೋರ್ಟ್ ತರಿಸಿ. ನಾನು ಅಲ್ಲಿ ಮಾತನಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಯಾರೋ ಒಬ್ಬರು ಚೀಟಿ ಬರೆದು ಕಳುಹಿಸಿದರು. ಮೈಸೂರಿನಲ್ಲಿ ಪ್ರಕಟವಾಗುವ ಡೈಲಿ ಪತ್ರಿಕೆಯಲ್ಲಿ ಮಾಜಿ ಮಂತ್ರಿಗಳ ಮನೆ ಮೇಲೆ ಸಿ ಬಿ ಐ ನವರು ರೈಡ್ ಮಾಡಿದ್ದಾರೆ ಎಂದು ಬಂದಿದೆ, ನಿಮ್ಮ ಅಭಿಪ್ರಾಯವೇನು ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ ಅದು ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ, ಇಂದಿರಾಗಾಂಧಿಯವರ ಕಂಟ್ರೋಲ್ ನಲ್ಲಿದೆ ಯಾವರೀತಿ ವಿಚಾರಣೆಯೊಗುತ್ತದೋ ನನಗೆ ಗೊತ್ತಿಲ್ಲ ಎಂದು. ಈಗ ಇಷ್ಟು ಮಾತ್ರ ಹೇಳಬಲ್ಲೆ. The Hon. Chief Minister holds the Home Portfolio. I would like to request the Hon. Chief Minister to get the Police report and make it clear to this House if I had said anything more than that. ನಾನು ಪೇಪರ್ಸ್ ತರಿಸುವುದು. ಪ್ರಜಾವಾಣಿ, ಇಂಡಿಯನ್ ಎಕ್ಸ್‌ಪ್ರೆಸ್. ಎಲ್ಲಾ ಪೇಪರ್‌ಗಳನ್ನು ತರಿಸುವುದಕ್ಕೆ ದುಡ್ಡು ಬೇಕಲ್ಲ. ಪುಕ್ಕಟೆ ಯಾರು ಕೊಡುತ್ತಾರೆ. ? ದಯಮಾಡಿ ವರದಿ ತರಿಸಿ.

ಅಧ್ಯಕ್ಷರು.—ಇದರ ಕಥೆ ಮುಗಿಯಿತು. ನಾನಂ ಹೇಳಿ ಆಯಿತು.

ಶ್ರೀ ಕಾಗೋಡು ತಿಮಪ್ಪ —ತಾವು ಅಪ್ಪಣೆ ಕೊಡಿಸಿದ ಮೇಲೂ ಮಾನ್ಯ ಅಜೀಜ್ ಸೇತರು ಹೇಗೆ ನಡೆದುಕೊಳ್ಳುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ.

ಅಧ್ಯಕ್ಷರು.— ಎಲ್ಲರೂ ಒಂದೊಂದು ಸಾರಿ ಹಾಗೆ ಮಾಡುತ್ತೀರಿ.

Expunction of Certain remarks in speech of Sri Kunaondur Lingappa

ಶ್ರೀ ಎಸ್ ಎಂ. ಶೀರ್ನಾಳಿ ಚಂದ್ರಶೇಖರ್.—(ಸಾಗರ). ರಜಾಕ್ಕೆ ಮೊದಲು ಕೊಣಂದೂರು ಲಿಂಗಪ್ಪನವರ ಮೇಲೆ ನಾನು ಒಂದು ಹಕ್ಕುಬಾಧ್ಯತಾ ನಿರ್ಣಯ ಕಳುಹಿಸಿದ್ದೆ. ಆದರ ಮೇಲೆ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ತಾವು ಮರೆತು ಬಿಟ್ಟಿದ್ದೀರೇನ್ನೋ. ತಮ್ಮನ್ನು ಮತ್ತು ಪಾರ್ಲಿಮೆಂಟರಿ ಮಿನಿಸ್ಟರನ್ನೂ ಕರೆಸಿ ಮಾತನಾಡಿದೆವು. ಏನೇನು ವ್ಯವಹಾರ ನಡೆಸಬೇಕೋ ಅದನ್ನು ಮಾಡಿದ್ದಾರೆ. ತಾವು ಮರೆತು ಬಿಟ್ಟಿದ್ದೀರಿ, ತಿರುಗಿ ತಿರಂಗಿ ಕೇಳಿದರೆ ಕಷ್ಟವಾಗುತ್ತದೆ.

ಶ್ರೀ ಎಸ್. ಎಂ. ಶೀರಾನಾಳಿ ಚಂದ್ರಶೇಖರ್.—ಅಸೆಂಬ್ಲಿಯಲ್ಲಿ ಹೇಳಿದ ಡ್ಯಾಮೇಜಿಂಗ್ ಸ್ಟೇಟ್‌ಮೆಂಟನ್ನು ಅಲ್ಲೇ ಸರಿಪಡಿಸಬೇಕೇ ಹೊರತು ಒಳಗಡೆ ಹೇಳಿದರೆ ಸರಿ ಹೋಗುತ್ತದೆಯೇ ? ಮಾನ್ಯ ಸದಸ್ಯರು ೨೫ ನಿಮಿಷಗಳ ಕಾಲ ನನ್ನ ಮೇಲೆ ಮತ್ತು ನನ್ನ ಫ್ಯಾಮಿಲಿ ಮೇಲೆ ಆಪಾದನೆ ಮಾಡಿದ್ದಾರೆ.

ಅಧ್ಯಕ್ಷರಂ.—ಅದನ್ನು ಎಕ್ಸ್‌ಪಂಜ್ ಮಾಡಿಸಿದ್ದೇನೆ.

NOTICE OF ADJOURNMENT MOTIONS ;

re : removal of doctors who were local candidates

ಶ್ರೀ ಎಸ್. ಬಂಗಾರಪ್ಪ.—(ಸೊರಬ) ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ತಮ್ಮ ಒಪ್ಪಿಗೆಗೆ ಕಳುಹಿಸಿದ್ದೇನೆ. ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಾ ಇರತಕ್ಕ ನೂರಾರು ಜನ ಡಾಕ್ಟರುಗಳ ವಿಷಯದಲ್ಲಿ ಸರ್ಕಾರದವರು ಕೂಡಲೇ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಆಗಲೇ ತಿಳಿಸಿದ್ದಾರೆ ಕಳೆದ ತಿಂಗಳು ೩೧ನೇ ತಾರೀಖು ಮುಗಿದರೂ ಕೂಡ ಇನ್ನೂ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳಲಿಲ್ಲ. ಈಗಾಗಲೇ ಸ್ಥಳೀಯ ಅಭ್ಯರ್ಥಿಗಳಿಗೆ notices have been issued terminating their services. ಇನ್ನು ಕೆಲವರಿಗೆ your services are continued at your own risk. ಎಂದು ಹೇಳಿದೆ.

ಅಧ್ಯಕ್ಷರಂ.—ಮಾನ್ಯ ಸದಸ್ಯರು ನಿಲುವಳಿ ಸೂಚನೆಯ ನೋಟೀಸ್ ಕೊಟ್ಟಿದ್ದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಮಾನ್ಯ ಸದಸ್ಯರು ನಿಂತುಕೊಂಡು ಉದ್ದಕ್ಕೆ ಕತೆ ಹೇಳುವುದಕ್ಕೆ ಶುರು ಮಾಡಿದರೆ ಹೇಗೆ ?

ಶ್ರೀ ಎಸ್ ಬಂಗಾರಪ್ಪ.—ಅವರ ಸೇವಾವಧಿ ೩೧ನೇ ತಾರೀಖಿಗೆ ಮುಗಿದು ಹೋಗಿದೆ, ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ, ಮಾನ್ಯ ಸಿದ್ಧವೀರಪ್ಪನವರೂ ಇಲ್ಲೇ ಇದ್ದಾರೆ, ಈ ವಿಷಯದಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನು ತಿಳಿಸಿದರೆ ಒಳ್ಳೆಯದು.

SRI H. SIDDAVEERPPA.—(Minister for Health) Government have already passed orders stating that until further orders their services have been continued. Government have also taken a decision to appoint a Screening Committee with the Chairman of the Public Service Commission or his nominee as Chairman of that committee and commissioner for Health Services and Director of Health Services as members so that all these local candidates may be screened, may be called for interviews and if they feel that they can be recommended for continuing their services or regularisation of their services or whatever it is. The Government will take a decision after the report of the committee. This has been done after I saw the Governor as desired by him and as advised by him because Government thought that it may not be wholly correct to regularise their services without going through a Screening Commitee. Whatever may be the period for which they are there, all the cases of these temporary candidates or local candidates will be scrutinised this way and final decision will be taken by the Governor. Until further orders their services have been continued.

ಶ್ರೀ ಜೆ.ಎಚ್. ಕಬ್ಬಾಡಿ.—೩೬ನೇ ತಾರೀಖು ಟರ್ಮಿನೇಷನ್ ಆರ್ಡರ್ಸ್ ಕಳುಹಿಸಿ ಈಗಾಗಲೇ ಡಾಕ್ಟರ್ಸ್‌ಗಳನ್ನು ಮನೆಗೆ ಕಳುಹಿಸಲಾಗಿದೆ.

ಶ್ರೀ ಹೆಚ್. ಸಿದ್ಧವೀರಪ್ಪ.—ಮನೆಗೆ ಯಾರು ಹೋಗಿಲ್ಲ. As a matter of fact, holidays intervened and the Director was not communicated of this order. So he said that they will be continued in service on their own.